

ಆತ್ಮರಕ್ಷಣೆಯ ಸಾಧನಗಳಾಗಿದ್ದವು. ಉದ್ದಾನುದ್ದ ಹೇರ್ ಪಿನ್‌ಗಳ ಒಂದು ತುದಿಯು ಮೊನಚಾಗಿರುತ್ತಿತ್ತು. ಗಟ್ಟಿಯಾದ ಲೋಹದಿಂದ ಅದು ತಯಾರಾಗುತ್ತಿತ್ತು. ಯಾರಾದರೂ ಪುರುಷರು ದೌರ್ಜನ್ಯ ಎಸಗಲು ಮುಂದಾದರೆ ಆ ಪಿನ್ ಆಯುಧವಾಗಿ ಬಳಕೆ ಆಗುತ್ತಿತ್ತು. ಪ್ರಾಚೀನ ಈಜಿಪ್ಟ್ ಇತಿಹಾಸದಲ್ಲಿ ಪತಿಯ ಸಾವಿಗೆ ಸೇಡು ತೀರಿಸಿಕೊಳ್ಳಲು ಹೇರ್ ಪಿನ್ ಆಯುಧವಾಗಿ ಬಳಕೆಯಾದ ಹಲವು ಉದಾಹರಣೆಗಳು ಸಿಗುತ್ತವೆ.

ಪ್ರಾಚೀನ ಚೀನಾದಲ್ಲಿ ಸ್ಯಾಂಟಿಯೋಜನ್ ಎಂದು ಕರೆಯಲಾಗುತ್ತಿದ್ದ ಚೂರಿಯಷ್ಟು ಮೊನಚಾದ ಹೇರ್ ಪಿನ್ ಬಳಸುವ ಲಲನೆಯರು ಇದ್ದರು. ದರೋಡೆಕೋರರು, ಅತ್ಯಾಚಾರಿಗಳಿಂದ ಪಾರಾಗಲು ಹೆಣ್ಮಕ್ಕಳಿಗೆ ಅದು ಅಸ್ತ್ರದಂತೆ ಇತ್ತು. ಹೋರಾಟದ ಕಥನಗಳಲ್ಲಿ ಹೇರ್ ಪಿನ್ ಪಾತ್ರ ಹೀಗಿದ್ದರೆ, ಶ್ರಮಿಕರ ವಿಷಯದಲ್ಲಿ ಅದರ ಪಾತ್ರ ಬೇರೆಯದೇ ಆಗಿತ್ತು. ಕೈಗಾರಿಕಾ ಕ್ರಾಂತಿ ಆದ ನಂತರ ಮಹಿಳೆಯರಿಗೂ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಅವಕಾಶ ವಿಶ್ವವ್ಯಾಪಿ ಸಿಕ್ಕಿತು. ಆಗ ಯಂತ್ರಗಳ ಮಧ್ಯೆ ಕೆಲಸ ಮಾಡುವವರು ಕೂದಲನ್ನು ಇಳಿಬಿಟ್ಟರೆ ಅಪಾಯಕ್ಕೆ ಸಿಲುಕುವ ಸಾಧ್ಯತೆ ಇತ್ತು. ಯಂತ್ರಕ್ಕೆ ಕೂದಲು ಸಿಕ್ಕಿಹಾಕಿಕೊಂಡರೆ ಜೀವಕ್ಕೇ ಕುತ್ತು ಬರುವ ಅಪಾಯವಿತ್ತು. ಹೀಗಾಗಿ ಅನೇಕ ಕಾರ್ಖಾನೆಗಳಲ್ಲಿ ಹೇರ್ ಕ್ಲಿಪ್ ಹಾಕುವುದನ್ನು ಕಡ್ಡಾಯ ಮಾಡಿದ್ದರು.

### ಹೆರಳಿನ ಹೂವು ಕ್ಲಿಪ್‌ಗೆ ಬಂತು

‘ಹೆರಳಿನ ಭಾರಕ್ಕೆ ತುಂಬಿರುವ ಕೆನ್ನೆಯಲಿ ಹದಿನಾರು ವರುಷದ ನೆರಳು’ ಎಂದು ಕೆ.ಎಸ್. ನರಸಿಂಹಸ್ವಾಮಿ ಅವರ ಕಾವ್ಯದಲ್ಲಿ ಸಾಲೊಂದು ಬರುತ್ತದೆ. ಹೆರಳು, ಅದಕ್ಕೊಂದು ಮಲ್ಲಿಗೆ ಮಾಲೆ ಸುತ್ತುಹಾಕಿ ಅಲಂಕರಿಸಿದರೆ ನೋಡುಗರಿಗೆ ಬೆರಗು ಎನ್ನುವ ಕಾಲವೊಂದಿತ್ತು. ಈಗ ಓಪನ್ ಹೇರು ಬಿಟ್ಕೊಂಡು ಕೂದಲು ಹಾರಾಡಿಸ್ಕಂಡು ಓಡಾಡುವ ಕಾಲ. ಆದರೂ ಫ್ಯಾಷನ್ ಚಿಗುರಿನಲ್ಲಿ ಬೇರು ಇದ್ದೆ ಇರುತ್ತದೆ. ಆ ಬೇರುಗಳು ಹೇಳುವಂತೆ ಹೂವಿನಾಕಾರದ ಕ್ಲಿಪ್ ಎಲ್ಲ ಕಾಲಕ್ಕೂ ಸಲ್ಲುವಂಥದು. ಈಗಲೂ ಸಣ್ಣ ಸಣ್ಣ ಹೂವಿನಾಕಾರದ ಕ್ಲಿಪ್ ಇಷ್ಟಪಡುವವರು ಇದ್ದಾರೆ. ಚಿಟ್ಟೆಯಾಕಾರದ ಕ್ಲಿಪ್‌ಗಳಿಗೂ ಕಾಲವೊಂದಿತ್ತು. ಈಗಲೂ ಟ್ರೆಂಡಿ ಕ್ಲಿಪ್ ಯಾವುದು ಎಂದು ವಿನ್ಯಾಸ ಹುಡುಕಿದರೆ ಇಂತಹುದೇ ಸ್ವರೂಪದವು ವ್ಯಾಪಕವಾಗಿ ಕಾಣಸಿಗುತ್ತವೆ. ಆಕಾರ, ಅಳತೆಯಲ್ಲಿ ಮಾತ್ರ ಬದಲಾವಣೆಯಿರುತ್ತದೆ.

### ಭಾರಿ... ದುಬಾರಿ

ಫ್ರಾನ್ಸ್‌ನ ದುಬಾರಿ ಫ್ಯಾಷನ್ ಉತ್ಪನ್ನಗಳ ಸಾಲಿನಲ್ಲಿ ‘ಡಿಯೋರ್’ ಬ್ರ್ಯಾಂಡ್ ಇದೀಗ ಜನಪ್ರಿಯ. ಅನಿಲ್ ಕಪೂರ್ ಪುತ್ರಿ ಸೋನಂ ಕಪೂರ್ ನಟಿಯಾಗಿ ಗುರುತಾಗಿರುವುದಕ್ಕಿಂತ ಹೆಚ್ಚಾಗಿ ತಮ್ಮ ಫ್ಯಾಷನ್ ಸೂಕ್ಷ್ಮಗಳಿಂದಲೇ ಹೆಣ್ಣುಮಕ್ಕಳಿಗೆ ಇಷ್ಟವಾದವರು. ಸರಳವೂ ನಾಜೂಕೂ ಆದ ವಿನ್ಯಾಸಗಳ ಫ್ಯಾಷನ್ ಪರಿಕರಗಳನ್ನು ಅವರು ಉಪಯೋಗಿಸುತ್ತಾರೆ. ಅವರು ‘ಡಿಯೋರ್’ನ ಒಂದು ಪುಟಾಣಿ ಕ್ಲಿಪ್ ಹಾಕಿಕೊಂಡಿದ್ದ ಫೋಟೊಗೆ ಮೆಚ್ಚುಗೆ ಸಂದಿತ್ತು. ಆ ಕ್ಲಿಪ್ ಬೆಲೆ ಸುಮಾರು ₹36 ಸಾವಿರ ರೂಪಾಯಿ. ಕಾಲಾಂತರದಲ್ಲಿ ಹೇರ್ ಕ್ಲಿಪ್ ವೈವಿಧ್ಯವೂ ವಿಸ್ತಾರಗೊಂಡಿದೆ. ಬೆಳ್ಳಿ, ಪಚ್ಚೆ, ಹವಳ, ತರಹೇವಾರಿ ಹರಳುಗಳು, ಸ್ಫಟಿಕ, ಮುತ್ತು ಇವೆಲ್ಲವನ್ನೂ ಬಳಸಿ ಹೇರ್ ಕ್ಲಿಪ್ ತಯಾರಿಸುತ್ತಾರೆ. ಚರ್ಮದ ಹೇರ್ ಕ್ಲಿಪ್ ಕೂಡ ಈ ಹೊತ್ತಿನ ಟ್ರೆಂಡ್. ಚಿನ್ನ, ವಜ್ರ ಬಳಸಿ ತಯಾರಿಸಲಾದ ಕ್ಲಿಪ್‌ಗಳನ್ನು ಬಳಸುವ ಉಳ್ಳವರೂ ಇದ್ದಾರೆ. ಸ್ವರೋಸ್ಕಿ, ಆಮ್ರಪಾಲಿ, ಜೈಪುರ್ ವಿಮೆನ್ ತರಹದ ಬ್ರ್ಯಾಂಡ್‌ಗಳು ಇಂತಹ, ಗ್ರಾಹಕರ ಅಗತ್ಯಕ್ಕೆ ತಕ್ಕ ಹೇರ್ ಕ್ಲಿಪ್ ತಯಾರಿಸಿ ಕೊಡುತ್ತವೆ.



ಸಿದ್ಧ ಮಾದರಿಯ ಕ್ಲಿಪ್‌ಗಳೂ ಲಭ್ಯ. ಸರಳ ವಿನ್ಯಾಸದ, ಪುಟ್ಟ ಆಕಾರದ ನಾಜೂಕಾದ ಕ್ಲಿಪ್‌ಗಳು ಹೆಚ್ಚು ದುಬಾರಿ. ಕುಶಲತೆಯ ಸೂಕ್ಷ್ಮಕ್ಕೆ ಬೆಲೆ ಕಟ್ಟಲಾದೀತೆ? ಗಾಡಿಯ ಮೇಲಿಂದ ಇಳಿದು, ಹೆಲ್ಮೆಟ್ ತೆಗೆದು, ಓಪನ್ ಬಿಟ್ಟ ಕೂದಲನ್ನು ಮೇಲೆ ಕಟ್ಟಿ ಕ್ಲಿಪ್ ಹಾಕುವ ಲಲನೆಯರನ್ನು ಬಿಟ್ಟ ಕಣ್ಣು ಬಿಟ್ಟ ಹಾಗೇ ನೋಡುವ ಹುಡುಗರಿಗೆ ಪಾಪ... ಕ್ಲಿಪ್ ಹಿಂದಿನ ಈ ಕಥೆಗಳೆಲ್ಲ ಗೊತ್ತಿರಲಿಕ್ಕಿಲ್ಲ. ಬೇಕಾಗಿಯೂ ಇಲ್ಲವೆನ್ನಿ.



## ಚೆಣ್ಣರ ಹೇರ್ ಕ್ಲಿಪ್; ಟಿಪ್ಸ್

ಪುಟ್ಟಪೋರಿಯರು ಬಣ್ಣ ಬಣ್ಣದ ಹೇರ್‌ಕ್ಲಿಪ್ ತೊಟ್ಟು ನಲಿದಾಡಿದರೆ ಅದೆಷ್ಟು ಚಂದ ನೋಡೋದಕ್ಕೆ. ಮಕ್ಕಳಿಗಾಗಿ ಹೇರ್ ಕ್ಲಿಪ್ ಆಯ್ಕೆ ಮಾಡುವಾಗ ಈ ಟಿಪ್ಸ್ ಪಾಲಿಸಿ.

- ಚೆಣ್ಣರಿಗೆ ‘ಕೂದಲು ಸ್ನೇಹಿ’ ಕ್ಲಿಪ್‌ಗಳನ್ನು ಖರೀದಿಸಿ.
- ಅಂಚು ಚೂಪಿಲ್ಲದ, ಮೃದುವಾದ ಕ್ಲಿಪ್‌ಗಳನ್ನೇ ಬಳಸಿ.
- ಈಗೀಗ ಮಕ್ಕಳಿಗಾಗಿಯೇ ಬಹುವರ್ಣದ ಹೇರ್ ಕ್ಲಿಪ್‌ಗಳು ಬಂದಿವೆ. ವರ್ಣ ಸಂಯೋಜನೆ ಮಾಡಿ ‘ರೇನ್‌ಬೋ’ ಮಾದರಿಯಲ್ಲಿ ತಲೆಗೂದಲಿಗೆ ಜೋಡಿಸಿದರೆ ನೋಡಲು ಚೆನ್ನಾಗಿರುತ್ತದೆ.
- ಹೆಣ್ಣುಮಕ್ಕಳ ತಲೆಗೂದಲನ್ನು ಆಗಾಗ ನೀಟಾಗಿ ಕತ್ತರಿಸುತ್ತಿರಿ. ಅಂದದ ವಿನ್ಯಾಸದ ಹೇರ್ ಕ್ಲಿಪ್‌ಗಳು ಫ್ಯಾಷನಬಲ್ ಆಗಿಯೂ ಇರುತ್ತವೆ.
- ಹೇರ್ ಕ್ಲಿಪ್ ಬದಲಾಗಿ ಹೆಡ್‌ಬ್ಯಾಂಡ್ ಧರಿಸಿದರೂ ಚೆನ್ನಾಗಿರುತ್ತದೆ.
- ‘ಗೋಲ್ಡನ್ ಸ್ಟೋನ್ ವರ್ಕ್ ಅಲಿಗೇಟರ್’ ಎಂಬ ಹೇರ್ ಕ್ಲಿಪ್ ಹೊಸ ವಿನ್ಯಾಸದಲ್ಲಿ ಮಾರುಕಟ್ಟೆಗೆ ಬಂದಿದೆ. ಹುಡುಗಿಯರಿಗೆ ಈ ಕ್ಲಿಪ್ ಸಖತ್ ಲುಕ್ ಕೊಡುತ್ತದೆ.
- ಮುತ್ತಿನಲ್ಲಿ ಮಾಡಿದ ಹೇರ್ ಕ್ಲಿಪ್ ಮಕ್ಕಳನ್ನು ಮತ್ತಷ್ಟು ಮುದ್ದಾಗಿ ಕಾಣುವಂತೆ ಮಾಡುತ್ತದೆ.
- ಹಣ್ಣುಗಳ ವಿನ್ಯಾಸದ ಹೇರ್ ಕ್ಲಿಪ್ ಮಕ್ಕಳ ಉಡುಪಿಗೆ ಮಿಕ್ಸ್ ಅಂಡ್ ಮ್ಯಾಚ್ ಮಾಡಿಕೊಳ್ಳಬಹುದು, ಸ್ಟ್ರಾಬೆರ್ರಿ ಪಿಂಕ್ ಪ್ಲಾಸ್ಟಿಕ್ ಟಿಕ್ ಟಿಕ್ ಹೇರ್ ಕ್ಲಿಪ್ ಹೊಸ ಆಯ್ಕೆ ಎನ್ನಬಹುದು.
- ಹೂವಿನ ವಿನ್ಯಾಸದ, ಪ್ರಾಣಿ ಪಕ್ಷಿಗಳ ವಿನ್ಯಾಸದ, ಚಿಟ್ಟೆಯಾಕಾರದ, ನವಿಲಿನ ಬಣ್ಣದ ಹೇರ್ ಕ್ಲಿಪ್‌ಗಳು ಮಕ್ಕಳನ್ನು ಥಟ್ ಅಂತ ಸೆಳೆಯುತ್ತವೆ. ಕ್ರಿಸ್ ಕ್ರಾಸ್ ಅರೆಪಾರದರ್ಶಕ ಸಣ್ಣ ಗುಲಾಬಿ ಬಾಳೆಹಣ್ಣಿನ ವಿನ್ಯಾಸದ ಹೇರ್ ಕ್ಲಿಪ್ ಕೂಡ ಲಭ್ಯ.

### ತಲೆಗೂದಲ ಪೋಷಣೆ

ಪುಟಾಣಿಗಳ ತಲೆಸ್ನಾನ ಮಾಡಿಸುವುದು ಅಮ್ಮಂದಿರ ಜವಾಬ್ದಾರಿ. ಉತ್ತಮ ಗುಣಮಟ್ಟದ ಶಾಂಪು ಬಳಸಿ ಕೂದಲನ್ನು ಪೋಷಿಸಿ. ತಲೆಗೂದಲಿಗೆ ದೂಳು ಮುಂತಾದ ಕಶ್ಮಲ ಸೇರಿಕೊಳ್ಳದಂತೆ ಎಚ್ಚರವಹಿಸಿ. ಹಾಗೆಯೇ ಕೂದಲಿಗೆ ಎಣ್ಣೆ ಹಾಕಿ ಎರಡು ಮೂರು ದಿನ ಹಾಗೇ ಬಿಡುವುದು ಸರಿಯಲ್ಲ. ಇದರಿಂದ ಕೂದಲ ಬುಡದಲ್ಲಿ ಅಲರ್ಜಿ ಉಂಟಾಗಬಹುದು.